# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 326+286+287+272+439+294

ಸದಸ್ಯರ ಹೆಸರು : ಶ್ರೀ ಮರಿತಿಬ್ಬೇಗೌಡ, ಶ್ರೀ ವೈ.ಎ.ನಾರಾಯಣಸ್ವಾಮಿ,
ಶ್ರೀ ಸುನಿಲ್ ವಲ್ಯಾಪುರೆ, ಶ್ರೀ ಮುನಿರಾಜುಗೌಡ,
ಶ್ರೀ ಕೆ.ಪ್ರತಾಪ್ ಸಿಂಹ ನಾಯಕ್

ಉತ್ತರಿಸಬೇಕಾದ ದಿನಾಂಕ : 15-02-2024

ಉತ್ತರಿಸಬೇಕಾದ ಸಚಿವರ : ಮಾನ್ಯ ಮುಖ್ಯ ಮಂತ್ರಿಗಳು

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | 7ನೇ ವೇತನ ಆಯೋಗದ ಶಿಫಾರಸ್ಸನ್ನು ಲೋಕಸಭಾ ಚುನಾವಣಾ ಅಧಿಸೂಚನೆಗೂ ಮುನ್ನ ಜಾರಿಗೆ ತರಲು ಸರ್ಕಾರ ಚಿಂತಿಸುವುದೇ; ಹಾಗಿದ್ದಲ್ಲಿ, ಈ ನಿಟ್ಟಿನಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು; | ರಾಜ್ಯ ಸರ್ಕಾರಿ ನೌಕರರ ವೇತನ ಮತ್ತು ಭತ್ಯೆಗಳ ಪರಿಷ್ಕರಣೆಯ ಅಗತ್ಯತೆಯನ್ನು ಪರಿಶೀಲಿಸಿ 06 ತಿಂಗಳೊಳಗಾಗಿ ರಾಜ್ಯ ಸರ್ಕಾರಕ್ಕೆ ಸೂಕ್ತ ವರದಿಯನ್ನು ಸಲ್ಲಿಸಲು ದಿನಾಂಕ 19-11-2022ರ ಸರ್ಕಾರಿ ಆದೇಶ ಸಂಖ್ಯೆ: ಆಇ 45 ಎಸ್.ಆರ್.ಪಿ 2022ರಲ್ಲಿ ತ್ರಿಸದಸ್ಯರ 7ನೇ ರಾಜ್ಯ ವೇತನ ಆಯೋಗವನ್ನು ರಚಿಸಿ ಆದೇಶ ಹೊರಡಿಸಲಾಗಿರುತ್ತದೆ. **ವೇತನ ಪರಿಷ್ಕರಣೆ ಕುರಿತಂತೆ ಸರ್ಕಾರದ ವಿವಿಧ ಇಲಾಖೆ / ಸಂಸ್ಥೆಗಳೊಂದಿಗೆ ವೇತನ ಆಯೋಗದ ಸಮಾಲೋಚನಾ ಕಾರ್ಯಗಳು ಪ್ರಗತಿಯಲ್ಲಿರುವುದನ್ನು** ಗಮನಿಸಿದ ಸರ್ಕಾರವು ದಿನಾಂಕ: 15.06.2023ರ ಆದೇಶದಲ್ಲಿ **ವೇತನ ಆಯೋಗದ ಕಾಲಾವಧಿಯನ್ನು** ದಿನಾಂಕ: 19.05.2023 ರಿಂದ 06 ತಿಂಗಳವರೆಗೆ **ವಿಸ್ತರಿಸಿದ್ದು** ದಿನಾಂಕ: 06.11.2023ರ **ಆದೇಶದನ್ವಯ ಅಂತಿಮವಾಗಿ ಆಯೋಗದ ಕಾಲಾವಧಿಯನ್ನು** 15.03.2024ರವರೆಗೆ ವಿಸ್ತರಿಸಿ ಆದೇಶಿಸಲಾಗಿರುತ್ತದೆ.<br><br>ವೇತನ ಆಯೋಗದ ಕಾರ್ಯನಿರ್ವಹಣೆಗಾಗಿ ದಿನಾಂಕ: 01.12.2023ರ ಆದೇಶದನ್ವಯ ತಾತ್ಕಾಲಿಕವಾಗಿ ಅತ್ಯಗತ್ಯವಾದ ಹುದ್ದೆಗಳನ್ನು ಸೃಜಿಸಲಾಗಿದ್ದು ಸದರಿ ಹುದ್ದೆಗಳನ್ನು ಸರ್ಕಾರದ ವಿವಿಧ ಇಲಾಖೆಗಳಿಂದ ನಿಯೋಜನೆ ಮೂಲಕ |
| (ಆ) | ಯಾವ ಕಾಲಮಿತಿಯೊಳಗೆ ಸರ್ಕಾರವು ಏಳನೇ ರಾಜ್ಯ ವೇತನ ಆಯೋಗದ ವರದಿ ಪಡೆದು ಸರ್ಕಾರಿ ನೌಕರರ ವೇತನ ಪರಿಷ್ಕರಣೆಗೆ ಮಾಡುವುದು? ವೇತನ ಆಯೋಗದ ಶಿಫಾರಸ್ಸುಗಳನ್ನು ಸಂಪೂರ್ಣವಾಗಿ ಜಾರಿಗೆ ತರಲಾಗುವುದೇ; | |
| (ಇ) | ಸರ್ಕಾರಿ ನೌಕರರ ವೇತನ ಮತ್ತು ಭತ್ಯೆಗಳ ಪರಿಷ್ಕರಣೆಗಾಗಿ 7ನೇ ವೇತನ ಆಯೋಗವನ್ನು ಯಾವಾಗ ನೇಮಕ ಮಾಡಲಾಗಿದೆ; ಸದರಿ ಆಯೋಗವನ್ನು ನೇಮಕ ಮಾಡುವಾಗ ಅಂತಿಮ ವರದಿ ನೀಡಲು ಆಯೋಗಕ್ಕೆ ನಿಗಡಿಪಡಿಸಲಾದ ಕಾಲಾವಧಿ ಎಷ್ಟು; | |
| (ಈ) | ಸರ್ಕಾರಿ ನೌಕರರ ವೇತನ ಮತ್ತು ಭತ್ಯೆಗಳ ಪರಿಷ್ಕರಣೆಗಾಗಿ 7ನೇ ವೇತನ ಆಯೋಗವನ್ನು ಯಾವಾಗ ನೇಮಕ ಮಾಡಲಾಗಿದೆ; ಸದರಿ ಆಯೋಗವನ್ನು ನೇಮಕ ಮಾಡುವಾಗ ಅಂತಿಮ ವರದಿ ನೀಡಲು ಆಯೋಗಕ್ಕೆ ನಿಗದಿಪಡಿಸಲಾದ ಕಾಲಾವಧಿ ಎಷ್ಟು; | |

| | | |
|---|---|---|
| (ಉ) | ಸರ್ಕಾರಕ್ಕೆ ವರದಿ ಸಲ್ಲಿಸುವ ಹಂತದಲ್ಲಿರುವ ಆಯೋಗದ ಅವಧಿಯನ್ನು ಎಷ್ಟು ಬಾರಿ ಮುಂದೂಡಲಾಗಿದೆ; ಇದಕ್ಕೆ ಬೇಕಾಗುವ ಹಣ ಎಷ್ಟು; ವೇತನ ಆಯೋಗದ ವರದಿಯನ್ನು ಯಾವಾಗ ಜಾರಿಗೊಳಿಸಲಾಗುವುದು ಯಾವ ದಿನಾಂಕದಿಂದ ನೌಕರರಿಗೆ ಆರ್ಥಿಕ ಸೌಲಭ್ಯವನ್ನು ಕಲ್ಪಿಸಲಾಗುವುದು; (ಸಂಪೂರ್ಣ ಮಾಹಿತಿ ನೀಡುವುದು) | ಭರ್ತಿಮಾಡಲು ಅವಕಾಶ ಕಲ್ಪಿಸಿರುವುದರಿಂದ ಸಿಬ್ಬಂದಿಗಳ ವೇತನ ಪಾವತಿಗಾಗಿ ಉಂಟಾಗುವ ಅನಗತ್ಯ ಹೆಚ್ಚುವರಿ ವೆಚ್ಚವನ್ನು ತಗ್ಗಿಸಲಾಗಿರುತ್ತದೆ.<br>ರಾಜ್ಯ ಸರ್ಕಾರಿ ನೌಕರರ ವೇತನ ಮತ್ತು ಭತ್ಯೆಗಳ ಪರಿಷ್ಕರಣೆಯ ವಿಷಯವು ಸರ್ಕಾರದ ನೀತಿ ನಿರ್ಣಯಕ್ಕೆ ಸಂಬಂಧಿಸಿದ ವಿಷಯವಾಗಿದ್ದು, ವೇತನ ಆಯೋಗವು ಸಲ್ಲಿಸುವ ಅಂತಿಮ ವರದಿಯನ್ನು ರಾಜ್ಯದ ಆರ್ಥಿಕ ಸ್ಥಿತಿಗತಿಗಳನ್ನು ಗಮನದಲ್ಲಿರಿಸಿ ಪರಿಶೀಲಿಸಲಾಗುವುದು<br>ಪ್ರಸ್ತುತ ರಾಜ್ಯ ಸರ್ಕಾರವು ವೇತನ ಆಯೋಗದ ಅಂತಿಮ ವರದಿಯ ನಿರೀಕ್ಷೆಯಲ್ಲಿರುತ್ತದೆ. |
| (ಊ) | ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಒಟ್ಟು ಸರ್ಕಾರಿ ನೌಕರರ ಸಂಖ್ಯೆ ಎಷ್ಟು ಇದರಲ್ಲಿ ಹಳೆ ಪಿಂಚಣಿಗೆ ಒಳಪಟ್ಟಿರುವ ನೌಕರರ ಸಂಖ್ಯೆ ಎಷ್ಟು? ಹೊಸ ಪಿಂಚಣಿ ವ್ಯವಸ್ಥೆಗೆ ಒಳಪಟ್ಟಿರುವ ನೌಕರರ ಸಂಖ್ಯೆ ಎಷ್ಟು? | ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಒಟ್ಟು ಸರ್ಕಾರಿ ನೌಕರರ ಸಂಖ್ಯೆ:5,09,384.<br>ಹಳೆ ಪಿಂಚಣಿ ಯೋಜನೆಗೆ ಒಳಪಟ್ಟಿರುವ ನೌಕರರ ಸಂಖ್ಯೆ:2,41,260<br>ರಾಷ್ಟ್ರೀಯ ಪಿಂಚಣಿ ಯೋಜನೆಗೆ ಒಳಪಟ್ಟಿರುವ ನೌಕರರ ಸಂಖ್ಯೆ:2,68,124 |
| (ಋ) | 2006ರಲ್ಲಿ ಹೊಸ ಪಿಂಚಣಿ ವ್ಯವಸ್ಥೆ ಜಾರಿಯಾದ ನಂತರ ನೇಮಕಾತಿ ಹೊಂದಿ ನಿವೃತ್ತಿ ಹೊಂದಿದ ನೌಕರರ ಸಂಖ್ಯೆ ಎಷ್ಟು? ಅವರು ಮಾಸಿಕವಾಗಿ ಪಡೆಯುತ್ತಿರುವ ಪಿಂಚಣಿಯೆಷ್ಟು; | ಎನ್.ಪಿ.ಎಸ್. ಯೋಜನೆಯಡಿ ನಿವೃತ್ತಿ ಹೊಂದಿ NSDL-CRAರವರಿಂದ ಪ್ರಾನ್ ಖಾತೆಯಲ್ಲಿರುವ ಮೊತ್ತ ಇತ್ಯರ್ಥಪಡಿಸಿರುವ ನೌಕರರ ಸಂಖ್ಯೆ:1686.<br>ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ(ಎಸ್.ಪಿ.ಎಲ್) 203 ಪಿಇಎನ್ 2012 (ಪಿ) ದಿನಾಂಕ 18-05-2016 ಮತ್ತು ಸರ್ಕಾರದ ಆದೇಶ ಸಂಖ್ಯೆ: ಆಇ 201 ಪಿಇಎನ್ 2021 ದಿನಾಂಕ 29-11-2021ರನ್ವಯ ಈ ನೌಕರರ ಪ್ರಾನ್ ಖಾತೆಯಲ್ಲಿರುವ ಮೊತ್ತದಲ್ಲಿ 60% ಅನುಪಾತದಲ್ಲಿ ನೌಕರರಿಗೆ ಇತ್ಯರ್ಥಪಡಿಸಿ, ಉಳಿದ 40% ಮೊತ್ತ ಸಂಬಂಧಿಸಿದ ನಿವೃತ್ತ ನೌಕರರು ASP ರವರಲ್ಲಿ ಹೂಡಿಕೆ ಮಾಡಿ ಮಾಸಿಕ ಪಿಂಚಣಿ ಪಡೆಯಬೇಕಿರುತ್ತದೆ. |
| (ಎ) | ದಿನಾಂಕ 01-04-2006ರಿಂದ ಸೇವೆಗೆ ಸೇರಿದ ಸರ್ಕಾರಿ / ಅನುದಾನಿತ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಬೋಧಕ / | ಸರ್ಕಾರದ ಆದೇಶ ಸಂಖ್ಯೆ: ಆಇ 89 ಪಿಇಎನ್ 2023 ದಿನಾಂಕ 01-03-2023ರಲ್ಲಿ ರಾಜ್ಯದಲ್ಲಿ ಜಾರಿ ಇರುವ ರಾಷ್ಟ್ರೀಯ ಪಿಂಚಣಿ |

| | | |
|---|---|---|
| | ಬೋಧಕೇತರರಿಗೆ ಹಾಗೂ ಅನುದಾನಿತ ಶಿಕ್ಷಕರ ನೌಕರರಿಗೂ ಅನ್ವಯವಾಗುವಂತೆ ಹಳೆ ಪಿಂಚಣಿ ಯೋಜನೆಯನ್ನು ಎಂದಿನಿಂದ ಜಾರಿಗೆ ತರಲಾಗುವುದು; ಹಾಗಾದಲ್ಲಿ ಈ ಸಂಬಂಧ ಇದುವರೆವಿಗೆ ಕೈಗೊಂಡಿರುವ ಕ್ರಮಗಳೇನು; ಯಾವ ಕಾಲಮಿತಿಯಲ್ಲಿ ಹಳೆ ಪಿಂಚಣಿ ಯೋಜನೆಯನ್ನು ಜಾರಿಗೆ ತರಲಾಗುವುದು? | ಯೋಜನೆಯನ್ನು ರದ್ದು ಪಡಿಸುವ ಸಂಬಂಧ ಈಗಾಗಲೇ ಹಳೆ ಪಿಂಚಣಿ ಯೋಜನೆಯನ್ನು ಮರುಜಾರಿ ಮಾಡಿರುವ ರಾಜ್ಯಗಳಲ್ಲಿ ಈ ಯೋಜನೆಯನ್ನು ಅನುಷ್ಠಾನಗೊಳಿಸಿರುವ ಕುರಿತು ಕೈಗೊಂಡಿರುವ ಕ್ರಮಗಳ ಬಗ್ಗೆ ಅಧ್ಯಯನ ನಡೆಸಿ ವರದಿ ಸಲ್ಲಿಸಲು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಿ ಆದೇಶಿಸಿದೆ. |

ಸಂ: ಆಇ 06 ಎಸ್‌ಆರ್‌ಪಿ 2024

(ಸಿದ್ದರಾಮಯ್ಯ)
ಮುಖ್ಯಮಂತ್ರಿ